ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ ಎಡಿಎಂಐ೦ಇಎಸ್‌ಟಿ 4(ಬಿ) (1) 5 2020/892 ಆಯುಕ್ತರ ಕಛೇರಿ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು-560001
ದಿನಾಂಕ: 05.02.2021

ಹಿಂಬರಹ

ವಿಷಯ: ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿನ ಅನುದಾನಿತ ಬೋಧಕೇತರ ಸಿಬ್ಬಂದಿಗಳು ತಮಗೆ ಅನುದಾನ ಪೂರ್ವದ ಸೇವೆಯನ್ನು ಪರಿಗಣಿಸಿ ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಲು ಕೋರಿರುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 78 ಟಿಪಿಇ 2013 ದಿ: 27.12.2013 (ಶ್ರೀಮತಿ ರಾಜೇಶ್ರೀ ಚೌಧರಿ ಮತ್ತು ಇತರ ಬೋಧಕೇತರ ಸಿಬ್ಬಂದಿಗಳು ಎನ್.ವಿ. ಪಾಲಿಟೆಕ್ನಿಕ್ ಕಲಬುರ್ಗಿ).
2. ಸರ್ಕಾರದ ಆದೇಶ ಸಂಖ್ಯೆ: ಇಡಿ 82 ಟಿಪಿಇ 2013, ದಿ: 24.01.2014 (ಶ್ರೀ ಮಹೇಶ್.ಬಿ., ಸಹಾಯಕರು ಮತ್ತು ಇತರ ಬೋಧಕೇತರ ಸಿಬ್ಬಂದಿಗಳು, ಎಸ್.ಜೆ.ಎಂ. ಪಾಲಿಟೆಕ್ನಿಕ್ ಚಿತ್ರದುರ್ಗ)
3. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ ಡಿಟಿಇ 04 ಜಿಆರ್‌ಟಿ (2) 2014, ದಿನಾಂಕ: 05.09.2014
4. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ: ಡಿಟಿಇ 06 ಡಿವಿಪಿ (೧) 2015, ದಿ: 08.06.2015
5. ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ ಡಿವಿಪಿ 06 ಡಿವಿಪಿ (1) 2019, ದಿ: 10.04.2019 ಮತ್ತು 26.04.2019
6. ವಿವಿಧ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಸಿಬ್ಬಂದಿಗಳ ಮನವಿಗಳು.

***********

ರಾಜ್ಯದ ವಿವಿಧ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ವೇತನಾನುದಾನದಡಿಯಲ್ಲಿ ಅನುಮೋದನೆಗೊಂಡು ಕಾರ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳು ಮತ್ತು ಕರ್ನಾಟಕ ರಾಜ್ಯ ಅನುದಾನಿತ ಪಾಲಿಟೆಕ್ನಿಕ್ ಬೋಧಕ ಮತ್ತು ಆಡಳಿತ ಸಿಬ್ಬಂದಿ ವರ್ಗದವರು ಉಲ್ಲೇಖ 06 ರಲ್ಲಿ ಮನವಿಗಳನ್ನು ಸಲ್ಲಿಸಿ, ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ಜಾರಿಯಾದ ನಂತರವೂ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನಿತ ಉಪನ್ಯಾಸಕರು ವೇತನ ಮರುನಿಗದಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದು ಅನುದಾನಪೂರ್ವದ ಸೇವೆಯನ್ನು ಪರಿಗಣಿಸಿ ವೇತನ ಪಡೆಯುತ್ತಿದ್ದು, ಅವರಂತೆ ಅನುದಾನಿತ ಬೋಧಕೇತರ ಸಿಬ್ಬಂದಿಗಳಿಗೂ ಸಹ ಸಂಸ್ಥೆಯು ಅನುದಾನಕ್ಕೊಳಪಡುವ ಪೂರ್ವದಲ್ಲಿ ನೇಮಕಾತಿ ಹೊಂದಿದ ದಿನಾಂಕದಿಂದ ಕಾಲ್ಪನಿಕ ವೇತನ ನಿಗದಿ ಮಾಡಲು ಮತ್ತು ಈ ಸಂಬಂಧವಾಗಿ ಮಾನ್ಯ ವಿಧಾನಪರಿಷತ್ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿಯವರ ವರದಿಯನ್ನು ಜಾರಿ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ, ಈ ಹಿಂದೆ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಹಲವು ಬೋಧಕೇತರ ವೃಂದದ ಸಿಬ್ಬಂದಿಗಳು ತಮಗೆ ಅನುದಾನ ಪೂರ್ವದ ಸೇವೆಯನ್ನು ಪರಿಗಣಿಸಿ, ವೇತನ ಮತ್ತು ಸೇವಾ ಸೌಲಭ್ಯಗಳನ್ನು ಮಂಜೂರು ಮಾಡಲು ಕೋರಿ ಮಾನ್ಯ ಉಚ್ಚ ನ್ಯಾಯಾಲಯಗಳಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಗಳ ಮೇಲಿನ ಮಾನ್ಯ ನ್ಯಾಯಾಲಯದ ಆದೇಶಗಳಂತೆ ಸರ್ಕಾರವು ಹಲವು ಸಿಬ್ಬಂದಿಗಳಿಗೆ ಅವರ ನೇಮಕಾತಿ ದಿನಾಂಕದಿಂದ ವೇತನಾನುದಾನದ ವ್ಯಾಪ್ತಿಗೆ ಒಳಪಡಿಸಿದ ದಿನಾಂಕದವರೆಗೆ ಸಲ್ಲಿಸಿರುವ ಸೇವೆಯನ್ನು **ಸರ್ಕಾರವು ಭವಿಷ್ಯದಲ್ಲಿ ತೆಗೆದುಕೊಳ್ಳುವ ತೀರ್ಮಾನ ಹಾಗೂ ನ್ಯಾಯಾಲಯವು ನೀಡಬಹುದಾದ ತೀರ್ಪಿಗೆ ಒಳಪಡುವ ಷರತ್ತುಗಳಿಗೊಳಪಟ್ಟು** ಪಿಂಚಣಿ ಮತ್ತು ಇತರೆ

ಸೇವಾ ಸೌಲಭ್ಯಗಳಿಗೆ ಪರಿಗಣಿಸಿ ಆದೇಶಿಸಿರುತ್ತದೆ (ಉಲ್ಲೇಖ 1 ಮತ್ತು 2) ಆದರೆ ಸದರಿ ಆದೇಶಗಳು ಜಾರಿಯಾಗುವ ಮುನ್ನವೇ ಸರ್ಕಾರವು ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ಅನ್ನು ದಿ: 01.06.95 ರಿಂದ ಪೂರ್ವಾನ್ವಯವಾಗುವಂತೆ ದಿ: 27.03.14 ರಂದು ಜಾರಿಗೆ ತಂದಿರುತ್ತದೆ. ಸದರಿ ಅಧಿನಿಯಮದನ್ವಯ ಅನುದಾನ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲು ಅವಕಾಶವಿರುವುದಿಲ್ಲ.

ಸದರಿ ಅಧಿನಿಯಮವನ್ನು ಪ್ರಶ್ನಿಸಿ ಅನುದಾನಿತ ಸಿಬ್ಬಂದಿಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಧಾರವಾಡ ಪೀಠದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 21216/2014 ರಲ್ಲಿ ಮಾನ್ಯ ನ್ಯಾಯಾಲಯವು ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ಅನ್ನು ಅಸಂವಿಧಾನಕವೆಂದು ಅಧಿನಿಯಮವನ್ನು ವಜಾಗೊಳಿಸಿರುತ್ತದೆ.

ಆದರೆ ಸದರಿ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಸರ್ಕಾರವು ರಿಟ್ ಅಪೀಲು ಸಂಖ್ಯೆ: 2476/2015 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣವು ಮಾನ್ಯ ನ್ಯಾಯಾಲಯದ ವಿಚಾರಣೆಯ ಹಂತದಲ್ಲಿರುತ್ತದೆ. ಈ ರಿಟ್ ಅಪೀಲಿನಲ್ಲಿ ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.

"In so far as the in-service respondents are concerned, the State shall go on paying their current emoluments in terms of the re-fixation, subject, however, to the result of the writ appeals. However, they are restrained from initiating any recovery proceedings for recovery of the arrears of pay.

So far as the retired employees are concerned, the pension they are getting shall be continued to be paid to them. The State shall be paying the pension as are paid to those retired employees as of today.

So far as recovery proceedings and calculation of the pension in terms of the new regulation are concerned, the proceedings shall however, remain stayed."

ಮುಂದುವರೆದು, ಇತ್ತೀಚೆಗೆ ಶ್ರೀಮತಿ ಮೀನಾಕ್ಷಿ ಮತ್ತು ಇತರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮಧ್ಯಂತರ ಅಪೀಲು ಸಂಖ್ಯೆ: 3/2019 ರಲ್ಲಿ ದಿನಾಂಕ: 20.01.2020 ರಲ್ಲಿ ಮಾನ್ಯ ನ್ಯಾಯಾಲಯವು ನೀಡಿದ ಆದೇಶದಲ್ಲಿ ದಿನಾಂಕ: 27.11.2015 ರ ಮಧ್ಯಂತರ ಆದೇಶದನ್ವಯ ಕ್ರಮ ಕೈಗೊಳ್ಳಲು ಸೂಚಿಸಿ ಈ ಕೆಳಕಂಡಂತೆ ಆದೇಶಿಸಿರುತ್ತದೆ.

"On hearing learned counsels, we are of the view that the interim order requires to be vacated.

The undertaking of the learned Advocate General was place on record that the State shall go on paying their current emoluments in terms of the re-fixation. It was stated that the respondent-State shall continue to pay

the pension, salary or compensation as was paid to the similarly placed persons as was being paid pursuant to the earlier orders namely, as was being paid prior to the impugned enactment. However, in terms of the order dated 04-09-2019, it was held that Clause (iii) of paragraph No.74 requires to be complied within the terms of Clause (ii) of paragraph No. 74.

The order dated 27-11-2015 is subsequent to the re-fixation whereas; the order dated 04-09-2019 is with reference to the position prior to re-fixation. Therefore, we are of the view that the direction contained in the orders dated 04-09-2019 runs contrary to the directions of this Court in its order dated 27-11-2015.

Under these circumstances, I.A. No.3 of 2019 is allowed and the order dated 04-09-2019 is recalled. State to comply with the order dated 27-11-2015."

ಮೇಲ್ಕಂಡ ಆದೇಶದ ಹಿನ್ನೆಲೆಯಲ್ಲಿ ದಿ: 27.11.2015 ರ ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಅನುದಾನಿತ ಶಿಕ್ಷಣ ಸಂಸ್ಥೆಗಳ ಬೋಧಕ ಮತ್ತು ಬೋಧಕೇತರ ವೃಂದದ ನೌಕರರಿಗೆ ಅನುದಾನಿತ ಸೇವೆಯನ್ನು ಪರಿಗಣಿಸಿ ವೇತನವನ್ನು ಮರುನಿಗದಿಗೊಳಿಸಿ ಪಾವತಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಮನವಿದಾರರು ಕೋರಿರುವಂತೆ ಸಂಸ್ಥೆಯು ಅನುದಾನಕ್ಕೊಳಪಡುವ ಪೂರ್ವದಲ್ಲಿ ನೇಮಕಾತಿ ಹೊಂದಿದ ದಿನಾಂಕದಿಂದ ಕಾಲ್ಪನಿಕ ವೇತನ ನಿಗದಿ ಮಾಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

ಮುಂದುವರೆದು, ಮನವಿದಾರರುಗಳ ಮನವಿಯಲ್ಲಿ ಅನುದಾನಿತ ಉಪನ್ಯಾಸಕ ವೃಂದದವರಿಗೆ ಮಾತ್ರ ಅನುದಾನ ಪೂರ್ವದ ಸೇವೆಯನ್ನು ಪರಿಗಣಿಸಿ ವೇತನ ಸೌಲಭ್ಯಗಳನ್ನು ಪಡೆಯುತ್ತಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ತಿಳಿಸುವುದೇನೆಂದರೆ, ವಿವಿಧ ಪಾಲಿಟೆಕ್ನಿಕ್ ಸಂಸ್ಥೆಗಳ ಹಲವು ಅನುದಾನಿತ ಉಪನ್ಯಾಸಕರು ಅನುದಾನ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿಯಲ್ಲಿ ಹಿರಿಯ/ಆಯ್ಕೆ ವೇತನ ಶ್ರೇಣಿ/ಎ.ಜಿ.ಪಿ. ಮಂಜೂರಾತಿ ಕೋರಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಗಳನ್ನು ಸಲ್ಲಿಸಿದ್ದು, ಸದರಿ ರಿಟ್ ಅರ್ಜಿಗಳಲ್ಲಿ ಮಾನ್ಯ ನ್ಯಾಯಾಲಯದ ಆದೇಶದಂತೆ ರಿಟ್ ಅಪೀಲು ಸಂಖ್ಯೆ: 2476/2015 ರಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶಕ್ಕೆ ಬದ್ಧರಾಗಿರುವ ಷರತ್ತಿಗೊಳಪಟ್ಟು ಸದರಿ ಸೌಲಭ್ಯಗಳನ್ನು ಮಂಜೂರು ಮಾಡಲು ಆದೇಶಿಸಿದ ಮೇರೆಗೆ ಸರ್ಕಾರದ ಅನುಮತಿ ಪಡೆದು, ಉಪನ್ಯಾಸಕರು ಅನುದಾನ ಪೂರ್ವದಲ್ಲಿ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಕೆರಿಯರ್ ಅಡ್ವಾನ್ಸ್‌ಮೆಂಟ್ ಯೋಜನೆಯಡಿಯಲ್ಲಿ ಹಿರಿಯ/ಆಯ್ಕೆ ವೇತನ ಶ್ರೇಣಿ/ಎ.ಜಿ.ಪಿ. ಸೌಲಭ್ಯಗಳನ್ನು ಮಂಜೂರು ಮಾಡಲಾಗಿದೆ.

ಆದರೆ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಗಳ (ವೇತನ, ನಿವೃತ್ತಿ ವೇತನ ಮತ್ತು ಇತರೆ ಸೌಲಭ್ಯಗಳ ನಿಯಂತ್ರಣ) ಅಧಿನಿಯಮ 2014 ಜಾರಿಗೆ ಬಂದ ನಂತರ ಅನುದಾನಿತ ಸೇವೆಯನ್ನು ಮಾತ್ರ ಪರಿಗಣಿಸಿ, ವೇತನ ಮರುನಿಗದಿಗೊಳಿಸಲು ಸೂಚಿಸಿ, ಉಲ್ಲೇಖ 3, 4 ಮತ್ತು 5 ರಲ್ಲಿ ಸುತ್ತೋಲೆಗಳನ್ನು ಹೊರಡಿಸಲಾಗಿತ್ತು. ಆದರೆ ಹಲವು ಅನುದಾನಿತ ಬೋಧಕ ವೃಂದದ ಸಿಬ್ಬಂದಿಗಳು

ಸದರಿ ಸುತ್ತೋಲೆಗಳನ್ನು ಪ್ರಶ್ನಿಸಿ, ಮಾನ್ಯ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಮಾನ್ಯ ನ್ಯಾಯಾಲಯವು ಸದರಿ ಸುತ್ತೋಲೆಗಳಿಗೆ ತಡೆಯಾಜ್ಞೆಯನ್ನು ನೀಡಿರುತ್ತದೆ. ಸದರಿ ತಡೆಯಾಜ್ಞೆ ತೆರವುಗೊಂಡ ನಂತರ ದಿನಾಂಕ: 27.11.2015 ರ ಮಾನ್ಯ ನ್ಯಾಯಾಲಯದ ಮಧ್ಯಂತರ ಆದೇಶದನ್ವಯ ಬೋಧಕ ವೃಂದದ ಸಿಬ್ಬಂದಿಗಳಿಗೂ ಸಹ ಅನುದಾನಿತ ಸೇವೆಯನ್ನು ಮಾತ್ರ ಪರಿಗಣಿಸಿ, ವೇತನವನ್ನು ಮರುನಿಗದಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಮುಂದುವರೆದು, ಅನುದಾನ ಪೂರ್ವದ ಸೇವೆಯನ್ನು ಕಾಲ್ಪನಿಕ ವೇತನ ನಿಗದಿಗೆ ಪರಿಗಣಿಸುವ ಸಂಬಂಧವಾಗಿ ಪರಿಶೀಲಿಸಲು ಸರ್ಕಾರವು, ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಬಸವರಾಜ ಹೊರಟ್ಟಿರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ದಿನಾಂಕ: ರಂದು ಈ ಹಿಂದೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತದೆ. ಆದರೆ ಸಂಬಂಧಪಟ್ಟ ಇಲಾಖೆಗಳು ನೀಡಿದ ಅಂದಾಜು ವೆಚ್ಚಕ್ಕೂ ವರದಿಯಲ್ಲಿರುವ ವೆಚ್ಚಕ್ಕೂ ಸಾಕಷ್ಟು ವ್ಯತ್ಯಾಸ ಕಂಡುಬಂದಿರುವುದನ್ನು ಗಮನಿಸಿ, ಅಂದಿನ ಮಾನ್ಯ ಉನ್ನತ ಶಿಕ್ಷಣ ಸಚಿವರ ಆದೇಶದಂತೆ ಸದರಿ ಸಮಿತಿಯನ್ನು ಪುನರುಜ್ಜೀವನಗೊಳಿಸಿ, ಆರ್ಥಿಕ ಪರಿಣಾಮಗಳನ್ನು ಮತ್ತೊಮ್ಮೆ ಕರಾರುವಕ್ಕಾಗಿ ನಿರ್ಣಯಿಸಲು ತೀರ್ಮಾನಿಸಿದ ಹಿನ್ನೆಲೆಯಲ್ಲಿ ಮತ್ತೊಮ್ಮೆ ವಿಶೇಷ ಸದನ ಸಮಿತಿಯನ್ನು ರಚಿಸಲಾಗಿರುತ್ತದೆ. ಅದರಂತೆ ಸದರಿ ಸಮಿತಿಯು ದಿನಾಂಕ: 24.01.2018 ರಂದು ವರದಿಯನ್ನು ಮಾನ್ಯ ಸಭಾಪತಿಗಳಿಗೆ ಸಲ್ಲಿಸಿದ್ದು, ಸದರಿ ವರದಿಯು ಪ್ರಸ್ತುತ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಖಾಸಗಿ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನುದಾನಿತ ಬೋಧಕ ಮತ್ತು ಬೋಧಕೇತರ ವೃಂದದ ಸಿಬ್ಬಂದಿಗಳಿಗೆ ಅನುದಾನ ಪೂರ್ವದ ಸೇವೆಯನ್ನು ಕಾಲ್ಪನಿಕ ವೇತನ ನಿಗದಿಗೆ ಪರಿಗಣಿಸುವ ವಿಷಯದ ಬಗ್ಗೆ ಸರ್ಕಾರವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅಪೀಲು ಸಂಖ್ಯೆ: 2476/2015 ರಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ತೀರ್ಪು ಮತ್ತು ಸರ್ಕಾರವು ಹೊರಡಿಸುವ ಆದೇಶದನ್ವಯ ಕ್ರಮ ಕೈಗೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

"ಟಿಪ್ಪಣಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ

ಇವರಿಗೆ:

1. ಎಲ್ಲಾ ಅನುದಾನಿತ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಂಶುಪಾಲರು.

ಪ್ರತಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ ಇವರಿಗೆ (ಮಾಹಿತಿಗಾಗಿ).
2. ಇ-ಆಡಳಿತ ವಿಭಾಗಕ್ಕೆ ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು.